# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 816(947) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಗಳೂರು ನಗರಾಭಿವೃದ್ಧಿ ವ್ಯಾಪ್ತಿಯ ಆಶಾ ಸಿಟಿ ಬಿಲ್ಡರ್ ಡೆವಲಪರ್ ಕೊಳಾಯಿ ಗ್ರಾಮ, ಚಿತ್ರಪುರದಲ್ಲಿ ನಿರ್ಮಿಸಿದ ಲೇಔಟ್‌ನ ಅಭಿವೃದ್ಧಿ ನಕ್ಷೆಯನ್ನು ಎಷ್ಟು ಭಾರಿ ಬದಲಾಯಿಸಲಾಗಿದೆ; (ವಿವರ ನೀಡುವುದು) | ಮಂಗಳೂರು ನಗರಾಭಿವೃದ್ಧಿ ವ್ಯಾಪ್ತಿಯ ಮಂಗಳೂರು ತಾಲ್ಲೂಕು, ಕುಳಾಯಿ ಗ್ರಾಮದ ಸ.ನಂ. 31/3ಎ1, 27/3, 31/4ಎ ಮತ್ತು ಇತರೆ ಸ.ನಂ. ರಲ್ಲಿನ ಪ್ರದೇಶದಲ್ಲಿ ಅಶಾ ಸಿಟಿ ಬಿಲ್ಡರ್ ಡೆವಲಪರ್ ವಸತಿ ಅಭಿವೃದ್ಧಿ ಯೋಜನೆಗೆ ಪ್ರಾಧಿಕಾರದಿಂದ ದಿನಾಂಕ:13.10.2010ರಂದು ಅನುಮೋದನೆ ನೀಡಲಾಗಿದ್ದು, ತದನಂತರ 05 ಬಾರಿ ಪರಿಷ್ಕೃತ ಅನುಮೋದನೆ ನೀಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ:-<br><br>1. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆದೇಶ ಸಂಖ್ಯೆ:ಮನಪ್ರಾ/ನಯೋಸ/ ಅ.ಯೋ./10/2010-11, ದಿನಾಂಕ: 03-12-2010 ರಂದು (ಒಟ್ಟು 45 ಎಕರೆ, 24.75 ಸೆಂಟ್ಸ್) ಸದರಿ ಅಭಿವೃದ್ಧಿ ಯೋಜನೆ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಶೇಕಡಾ 05 ರಷ್ಟು ಅಂದರೆ 9162.62 ಚ.ಮೀ ಜಾಗವನ್ನು ಸಿ.ಎ ನಿವೇಶನಕ್ಕೆ ಕಾಯ್ದಿರಿಸಲಾಗಿದೆ(ಪ್ರಾಧಿಕಾರದ ಸಭೆ ದಿನಾಂಕ: 13.04.2010 ರ ವಿಷಯ ಸಂಖ್ಯೆ 03 ರ ನಿರ್ಣಯದಂತೆ ಮೊದಲ ಬಾರಿಗೆ ಅನುಮೋದನೆ ನೀಡಲಾಗಿದೆ).<br><br>2. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 06-09-2013 ರಂದು ಪರಿಷ್ಕೃತ ಅಭಿವೃದ್ಧಿ ಯೋಜನೆ ನಕ್ಷೆಗೆ ಅನುಮೋದನೆ ನೀಡಲಾಗಿದೆ(ಒಟ್ಟು 45 ಎಕರೆ 24.75 ಸೆಂಟ್ಸ್). ಆ ಸಮಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳಂತೆ ಕಟ್ಟಡದ ಒಟ್ಟು ವಿಸ್ತೀರ್ಣದ ಶೇ.02 ರಷ್ಟು ಭಾಗವನ್ನು ಸಿ.ಎ ನಿವೇಶನಕ್ಕಾಗಿ ಕಾಯ್ದಿರಿಸಿ ಪ್ರಾಧಿಕಾರಕ್ಕೆ ಈ ಹಿಂದೆ ನೋಂದಾಯಿಸಲಾಗಿದ್ದ ಸಿ.ಎ ನಿವೇಶನವನ್ನು ಅರ್ಜಿದಾರರಿಗೆ ವರ್ಗಾಯಿಸಲಾಗಿರುತ್ತದೆ. ಪ್ರಾಧಿಕಾರದ ಸಭೆ ದಿನಾಂಕ: 22.12.2012 ರ ಹೆಚ್ಚುವರಿ ವಿಷಯ ಸಂಖ್ಯೆ 20(5) ರ ನಿರ್ಣಯದಂತೆ ಅನುಮೋದಿಸಲಾಗಿರುತ್ತದೆ(ಪರಿಷ್ಕೃತ-1). |

| | | |
|---|---|---|
| | | 3. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆದೇಶ ಸಂಖ್ಯೆ:ಮನಪ್ರಾ/ನಯೋಸ/ವಿನ್ಯಾಸ/ 980/ 2010-11, ದಿನಾಂಕ: 28-02-2017 ರಂತೆ (ಒಟ್ಟು 45 ಎಕರೆ 24.75 ಸೆಂಟ್ಸ್) ವಸತಿ ವಿನ್ಯಾಸ ಅನುಮೋದನೆ ನೀಡಲಾಗಿದ್ದು, ಶೇ. 5.25 ರಷ್ಟು (9778.48 ಚ.ಮೀ) ಅನ್ನು ಸಿ.ಎ ನಿವೇಶನಕ್ಕಾಗಿ ಕಾಯ್ದಿರಿಸಲಾಗಿದೆ. ಪ್ರಾಧಿಕಾರದ ಸಭೆ ದಿನಾಂಕ 19.12.2016 ರ ವಿಷಯ ಸಂಖ್ಯೆ 58(12) ರ ನಿರ್ಣಯದಂತೆ ಅನುಮೋದಿಸಲಾಗಿರುತ್ತದೆ(ಪರಿಷ್ಕೃತ-2). |
| | | 4. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆದೇಶ ಸಂಖ್ಯೆ: ಮನಪ್ರಾ/ನಯೋಸ/ವಿನ್ಯಾಸ/980/2010-11, ದಿನಾಂಕ:02-08-2018 ರಂತೆ (ಒಟ್ಟು 45 ಎಕರೆ 24.75 ಸೆಂಟ್ಸ್) ಪರಿಷ್ಕೃತ ವಸತಿ ವಿನ್ಯಾಸ ಅನುಮೋದನೆ ನೀಡಲಾಗಿದ್ದು, ಶೇ. 5.00 ರ ಬದಲಿಗೆ 9266.02 ಚ.ಮೀ ಅನ್ನು ಸಿ.ಎ ನಿವೇಶನಕ್ಕಾಗಿ ಕಾಯ್ದಿರಿಸಲಾಗಿದೆ. ಪ್ರಾಧಿಕಾರದ ಸಭೆ ದಿನಾಂಕ 24.03.2018 ರ ವಿಷಯ ಸಂಖ್ಯೆ 23 ರ ನಿರ್ಣಯದಂತೆ ಅನುಮೋದಿಸಲಾಗಿರುತ್ತದೆ(ಪರಿಷ್ಕೃತ-3). |
| | | 5. ನಂತರದಲ್ಲಿ ವಿನ್ಯಾಸ ಅನುಮೋದನೆಯನ್ನು ರದ್ದುಗೊಳಿಸಿ ಅಭಿವೃದ್ಧಿ ಯೋಜನೆ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿದಾರರು ಮತ್ತೊಮ್ಮೆ ಕೋರಿದ್ದು, ಅಭಿವೃದ್ಧಿ ಯೋಜನೆಯಲ್ಲಿ ಸಿ.ಎ ಮತ್ತು ಉದ್ಯಾನವನ ಬಯಲು ಜಾಗವನ್ನು ಅರ್ಜಿದಾರರೇ ನಿರ್ವಹಿಸಬೇಕಾಗಿರುವುದರಿಂದ ಈ ಹಿಂದಿನ ವಿನ್ಯಾಸ ಅನುಮೋದನೆಯಲ್ಲಿ ಕಾಯ್ದಿರಿಸಿದ ಶೇ. 10 ರಷ್ಟು (18552.18 ಚ.ಮೀ) ಉದ್ಯಾನವನ ಮತ್ತು ಬಯಲುಜಾಗದ ಪರಿತ್ಯಾಜನಾ ಪತ್ರವನ್ನು ರದ್ದುಗೊಳಿಸಿ ಮಾಲೀಕರಿಗೆ ವರ್ಗಾಯಿಸಲಾಗಿದೆ. ಹಾಗೂ ಒಟ್ಟು 45 ಎಕರೆ 24.75 ಸೆಂಟ್ಸ್ ಜಮೀನಿನಲ್ಲಿ 09 ಎಕರೆ 84.95 ಸೆಂಟ್ಸ್ (ಪರಭಾರೆ ಮಾಡಿದ ಜಮೀನು ಹೊರತುಪಡಿಸಿ) 35ಎಕರೆ 89.80 ಸೆಂಟ್ಸ್ ಗೆ ಅಭಿವೃದ್ಧಿ ಯೋಜನೆ ನಕ್ಷೆಗೆ ದಿನಾಂಕ: 04-02-2021 ರಂದು ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಸಭೆ ದಿನಾಂಕ: 31.08.2020 ರ ವಿಷಯ ಸಂಖ್ಯೆ 17 ರ ನಿರ್ಣಯದಂತೆ ಅನುಮೋದನೆ ನೀಡಲಾಗಿರುತ್ತದೆ (ಪರಿಷ್ಕೃತ-4). |
| | | 6. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:28-12-2022 ರಂದು ಕೆಲವೊಂದು ಬದಲಾವಣೆಯೊಂದಿಗೆ 35 ಎಕರೆ 89.80 ಸೆಂಟ್ಸ್ ಗೆ ಅಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ(ಪರಿಷ್ಕೃತ-5). |

| | | |
|---|---|---|
| (ಆ) | ಸದರಿ ಲೇಔಟ್ ನಕ್ಷೆ ಬದಲಾವಣೆಯಿಂದ "ಗೆಜೆಟ್ ಕಮ್ಯೂನಿಟಿ"ಗೆ ನೀಡುವ 03 ಎಕರೆ ಜಮೀನು CA ಸೈಟ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಅಭಿವೃದ್ಧಿ ಯೋಜನೆಯಲ್ಲಿ ಸಿ.ಎ ಮತ್ತು ಉದ್ಯಾನವನ ಹಾಗೂ ಬಯಲುಜಾಗವನ್ನು ಅರ್ಜಿದಾರರೇ ನಿರ್ವಹಿಸಬೇಕಾಗಿರುವುದರಿಂದ ಈ ಹಿಂದಿನ ವಿನ್ಯಾಸ ಅನುಮೋದನೆಯಲ್ಲಿ ಕಾಯ್ದಿರಿಸಿದ ಶೇ. 10 ರಷ್ಟು (18552.18 ಚ.ಮೀ) ಉದ್ಯಾನವನ ಮತ್ತು ಬಯಲುಜಾಗದ ಪರಿತ್ಯಾಜನಾ ಪತ್ರವನ್ನು ರದ್ದುಗೊಳಿಸಿ ಮಾಲೀಕರಿಗೆ ವರ್ಗಾಯಿಸಲಾಗಿದೆ. ಹಾಗೂ ಒಟ್ಟು ಕಟ್ಟಡ ವಿಸ್ತೀರ್ಣದ ಶೇ. 02 ರಷ್ಟು ಭಾಗವನ್ನು ಸಿ.ಎ ಉದ್ದೇಶಕ್ಕೆ ಕಾಯ್ದಿರಿಸಿ ಒಟ್ಟು 45 ಎಕರೆ 24.75 ಸೆಂಟ್ಸ್ ಜಮೀನಿನಲ್ಲಿ 09 ಎಕರೆ 84.95 ಸೆಂಟ್ಸ್(ಪರಭಾರೆ ಮಾಡಿದ ಜಮೀನು ಹೊರತುಪಡಿಸಿ) 35 ಎಕರೆ 89.80 ಸೆಂಟ್ಸ್ ಗೆ ಅಭಿವೃದ್ಧಿ ಯೋಜನೆ ನಕ್ಷೆಗೆ ದಿನಾಂಕ: 04-02-2021 ರಂದು ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಲೇಔಟ್ ನಕ್ಷೆ ಬದಲಾವಣೆಯಿಂದ "ಗೆಜೆಟ್ ಕಮ್ಯೂನಿಟಿ"ಗೆ ನೀಡುವ 03 ಎಕರೆ ಜಮೀನು CA ಸೈಟ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಇ) | 03 ಎಕರೆ ಸ್ಥಳಕ್ಕೆ ನಕ್ಷೆ ಬದಲಾವಣೆಯಿಂದ CA ಸೈಟ್ ನಿವೇಶನಕ್ಕಾಗಿ ಸರ್ಕಾರಕ್ಕೆ ನೀಡಬೇಕಾದ ಸ್ಥಳ ನಷ್ಟವಾಗದಂತೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ; | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ. |
| (ಈ) | ನಕ್ಷೆ ಬದಲಾವಣೆಗೆ ನಗರ ಯೋಜನೆ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆಯೇ? (ವಿವರ ನೀಡುವುದು) | ಉಪ ಪ್ರಶ್ನೆ (ಅ) ರಲ್ಲಿ ವಿವರಗಳನ್ನು ನೀಡಲಾಗಿದೆ.<br><br>ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆ ದಿನಾಂಕ:31-08-2020 ರ ವಿಷಯ ಸಂಖ್ಯೆ: 17 ರಂತೆ, ಸದರಿ ಒಟ್ಟು 45 ಎಕರೆ 24.75 ಸೆಂಟ್ಸ್ ಜಮೀನಿಗೆ ಅಭಿವೃದ್ಧಿ ಯೋಜನೆಗೆ ಅನುಮೋದಿಸಲು ನಿರ್ಣಯಿಸಲಾಗಿರುತ್ತದೆ. ಆದರೆ 09 ಎಕರೆ 84.95 ಸೆಂಟ್ಸ್ (ಪರಭಾರೆ ಮಾಡಲಾಗಿರುವ ಜಮೀನು) ವಿಸ್ತೀರ್ಣ ಹೊರತುಪಡಿಸಿ 35 ಎಕರೆ 89.80 ಸೆಂಟ್ಸ್ ವಿಸ್ತೀರ್ಣಕ್ಕೆ ದಿನಾಂಕ: 28.12.2022 ರಂದು ಅಭಿವೃದ್ಧಿ ಯೋಜನೆ ನಕ್ಷೆಗೆ ಅನುಮೋದನೆ ನೀಡಲಾಗಿದೆ(ಪರಿಷ್ಕೃತ-5). ಸದರಿ 09 ಎಕರೆ 84.95 ಸೆಂಟ್ಸ್ ವಿಸ್ತೀರ್ಣದ ಜಮೀನಿನ ಬಗ್ಗೆ ಯಾವುದೇ ನಿರ್ಣಯ ಕೈಗೊಂಡಿರುವುದಿಲ್ಲ. |

ಕಡತ ಸಂಖ್ಯೆ: ನಅಇ 480 ಮೈಅಪ್ರಾ 2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.